ಕಂ/ಉಪಲೋಕ್/ಜಿಎಲ್‌ಬಿ/2382/2021
ಪಿ.ಓ.ಎ.ಆರ್.ಇ–5

# ಕರ್ನಾಟಕ ಲೋಕಾಯುಕ್ತ

ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/2382/2021
ಪಿ.ಓ.ಎ.ಆರ್.ಇ–5 (ಮಂಡನಾಧಿಕಾರಿಯವರ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 19/01/2022.

20

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ಅಮರೇಶ್ ಬಿನ್ ನೀಲಕಂಠಪ್ಪ, ಪ್ರಥಮ ದರ್ಜೆ ಸಹಾಯಕ, ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ, ರಾಯಚೂರು ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

****

1. ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ, ಪೋಲಿಸ್ ಠಾಣೆ, ರಾಯಚೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ **ಶ್ರೀ. ಅಮರೇಶ್ ಬಿನ್ ನೀಲಕಂಠಪ್ಪ, ಪ್ರಥಮ ದರ್ಜೆ ಸಹಾಯಕ, ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ, ರಾಯಚೂರು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ. ಚನ್ನಬಸವ ಬಿನ್ ಮುದುಕಪ್ಪ ಛಲವಾದಿ, ಮ್ಯಾನೇಜರ್, ಸಿದ್ದಾರ್ಥ ಪತ್ತಿನ ಸಹಕಾರಿ ಬ್ಯಾಂಕ್ ನಿಯಮಿತ, ಮಾನ್ವಿ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಕೆಲಸ ಮಾಡುತ್ತಿರುವ ಬ್ಯಾಂಕಿಗೆ ಸೇರಿದ ಕಟ್ಟಡವು ಮಾನ್ವಿ ನಗರದ ಕರಡಿಗುಡ್ಡ ಕ್ರಾಸ್‌ನಲ್ಲಿ ಇದ್ದು, ಸದರಿ ಕಟ್ಟಡವನ್ನು ಹಿಂದುಳಿದ ವರ್ಗಗಳ ಹಾಸ್ಟಲ್‌ಗೆ ಬಾಡಿಗೆ ನೀಡಿದ್ದು, ಸದರಿ ಕಟ್ಟಡದ ಬಾಡಿಗೆಯು ಸರ್ಕಾರದಿಂದ ಅಪ್ರೂವಲ್ ಆಗಿ ಬಂದಿದ್ದು, ಸದರಿ ಆದೇಶದ ಪ್ರತಿಗೆ ಕೌಂಟರ್ ಸಹಿ ಮಾಡಿಸಿಕೊಡಲು 11,000/– ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ದೂರುದಾರರು ಆಗುವುದಿಲ್ಲ ಎಂದಾಗ 10,000/– ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ದುರ್ನಡತೆ ತೋರಿಸಿರುತ್ತಾರೆಂದು ಬರೆದುಕೊಂಡಿದ್ದು, ಸದರಿ ದೂರು ರಾಯಚೂರು ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 07/2018 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1)(ಡಿ) ಸ/ವಾ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ

ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 10,000/- ರೂ. ಲಂಚವನ್ನು ಪಡೆಯುವಾಗ ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2 **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಚನ್ನಬಸವ ಬಿನ್ ಮುದುಕಪ್ಪ ಛಲವಾದಿ, ಮ್ಯಾನೇಜರ್, ಸಿದ್ದಾರ್ಥ ಪತ್ತಿನ ಸಹಕಾರಿ ಬ್ಯಾಂಕ್ ನಿಯಮಿತ, ಮಾನ್ವಿ** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಕೆಲಸ ಮಾಡುತ್ತಿರುವ ಬ್ಯಾಂಕಿಗೆ ಸೇರಿದ ಕಟ್ಟಡವು ಮಾನ್ವಿ ನಗರದ, ಕರಡಿಗುಡ್ಡ ಕ್ರಾಸ್‌ನಲ್ಲಿ ಇದ್ದು ಅದನ್ನು ಹಿಂದುಳಿದ ವರ್ಗಗಳ ಹಾಸ್ಟಲ್‌ಗೆ ಬಾಡಿಗೆ ನೀಡಿದ್ದು, ಸದರಿ ಕಟ್ಟಡದ ಬಾಡಿಗೆಯು ಸರ್ಕಾರದಿಂದ ಅಪ್ರೂವಲ್ ಆಗಿ ಬಂದಿದ್ದು, ಸದರಿ ಆದೇಶದ ಪ್ರತಿಗೆ ಕೌಂಟರ್ ಸಹಿ ಮಾಡಿಸಿಕೊಡಲು ಎದುರುದಾರರು ಈಗಾಗಲೇ 10,000/- ರೂ. ಲಂಚವನ್ನು ಪಡೆದುಕೊಂಡು ಪುನಃ 11,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ದೂರುದಾರರು ಆಗುವುದಿಲ್ಲ ಎಂದಾಗ 10,000/- ರೂ. ಗಳನ್ನಾದರೂ ಕೊಡುವಂತೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಅದನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 03/05/2018 ರಂದು ರಾಯಚೂರು ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ 07/2018 ರಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ರಾಜಭಕ್ಷಿ 2) ಧರಣೇಂದ್ರ (ನೆರಳುಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಮೊಬೈಲ್‌ನ್ನು ಹಾಜರುಪಡಿಸಿದ್ದು, ಅದರಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಅದನ್ನು ಲಿಖಿಕರಿಸಿಕೊಂಡು ಸದರಿ ಸಂಬಾಷಣೆಯನ್ನು ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 10,000/- (500X20) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು, ದಾಖಲಿಸಿಕೊಂಡಿದ್ದು ಪೋಲೀಸ್ ಸಿಬ್ಬಂದಿ ನೋಟುಗಳ ಎರಡೂ ಬದಿಗೆ

ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-1 ಶ್ರೀ ರಾಜಭಕ್ಷಿ ಇವರ ಮೂಲಕ ದೂರುದಾರರ ಪ್ಯಾಂಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಶ್ರೀ ರಾಜಭಕ್ಷಿರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಧರಣೇಂದ್ರ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರನ್ನು ಭೇಟಿಯಾದಾಗ ಕೆಲಸದ ಬಗ್ಗೆ ವಿಚಾರಿಸಬೇಕು ಮತ್ತು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 03-05-2018 ರಂದು ಸಮಯ ಮಧ್ಯಾಹ್ನ 11.45 ರಿಂದ 1.00 ಘಂಟೆಯವರೆಗೆ ರಾಯಚೂರು ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಎದುರುದಾರರು ಕೆಲಸ ಮಾಡುವ ಲೋಕೋಪಯೋಗಿ ಇಲಾಖೆಯ ಕಛೇರಿಯನ್ನು ಮಧ್ಯಾಹ್ನ 1.10ಕ್ಕೆ ತಲುಪಿ, ವಾಹನಗಳನ್ನು ಕಾರ್ಯಾಲಯದಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿ ಧರಣೇಂದ್ರ ಇವರನ್ನು ಎದುರುದಾರರ ಕಛೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಸ್ವಲ್ಪ ದೂರದಲ್ಲಿ ಸಂಶಯಬರದಂತೆ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಎದುರುದಾರರು ತಮ್ಮ ಕೊಠಡಿಯಲ್ಲಿ ಇದ್ದು, ದೂರುದಾರರಿಂದ ಹಣ ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ ತಮ್ಮ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಹಣ ಪಡೆದುಕೊಂಡ ನಂತರ, ದೂರುದಾರರು ತನಿಖಾಧಿಕಾರಿಗೆ ತಲೆ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಿದ ಮೇರೆಗೆ ತಕ್ಷಣ ದಾಳಿತಂಡದವರು ಎದುರುದಾರರ ಕೊಠಡಿಗೆ ಬರಲಾಗಿ, ದೂರುದಾರರು ಎದುರುದಾರರನ್ನು ತೋರಿಸಿ ಇವರೆ ನನ್ನಿಂದ 10,000/- ರೂ.ಗಳನ್ನು ಲಂಚವಾಗಿ ಪಡೆದುಕೊಂಡವರು ಎಂದು ತೋರಿಸಿದ್ದು, ಆಗ ತನಿಖಾಧಿಕಾರಿಯವರು ತಮ್ಮ ಪರಿಚಯ ಮಾಡಿಕೊಂಡು ಎದುರುದಾರರ ಮೇಲೆ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. ಎದುರುದಾರರ ಎರಡು

ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ, ಲಂಚದ ಹಣವನ್ನು ಪ್ಯಾಂಟ್ ಜೇಬಿನಿಂದ ತೆಗೆದು ಎದುರುದಾರರು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚರು ಸದರಿ ನೋಟುಗಳ ನಂಬರ್‌ಗಳನ್ನು ಈಗಾಗಲೇ ದಾಖಲಿಸಿಕೊಂಡ ನಂಬರಿನೊಂದಿಗೆ ತಾಳೆಮಾಡಿ ನೋಡಲಾಗಿ, ನೋಟುಗಳ ನಂಬರುಗಳು ತಾಳೆಯಾದ ಮೇರೆಗೆ ತನಿಖಾಧಿಕಾರಿಗಳು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ಸದರಿ ಪ್ಯಾಂಟ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ದೂರುದಾರರು ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ತಮಗೆ ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳುವುದನ್ನು ಮರೆತಿರುತ್ತೇನೆ ಎಂದು ನುಡಿದಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ಎದುರುದಾರರು ಹಾಜರುಪಡಿಸಿದ್ದು, ಅದನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ರಕ್ಷಣಾ ಹೇಳಿಕೆ ಬರೆದುಕೊಡಲು ತಿಳಿಸಿದ್ದು, ಸದರಿಯವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ತಾನು ಯಾವುದೇ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ, ಬೇಗ ಕೆಲಸ ಮಾಡಿಕೊಡಲು ದೂರುದಾರರು ನನಗೆ ಹಣದ ಆಮಿಷ ತೋರಿಸಿರುತ್ತಾರೆ. ತನಗೆ ಈಗಾಗಲೇ ನೀಡಿದ 10,000/- ರೂ.ಗಳ ಹಣದಲ್ಲಿ ಕಾರ್ಯಪಾಲಕ ಅಭಿಯಂತರರಾದ ಶ್ರೀಕಾಂತ್ ಚೌಕಾ ರವರಿಗೆ 5000/-, ಅಧೀಕ್ಷಕರಾದ ಗುರುರಾಜರಾವ್ ಅವರಿಗೆ 3000/- ರೂ. ಹಾಗೂ ಅನ್ನಪೂರ್ಣಮ್ಮ ಅವರಿಗೆ 500/- ನೀಡಿರುತ್ತೇನೆ. ಇಂದು ಪಡೆದ 10,000/- ರೂ.ಗಳಲ್ಲಿ ಕಾರ್ಯಪಾಲಕ ಅಭಿಯಂತರರಾದ ಶ್ರೀಕಾಂತ್ ಚೌಕಾ ರವರಿಗೆ 5000/-, ಗುರುರಾಜರಾವ್, ಅಧೀಕ್ಷಕರು ಇವರಿಗೆ 3000/-, ಶ್ರೀ ತಿರುಮಲ, ಎಸ್‌ಡಿಎ ಇವರಿಗೆ 500/- ನೀಡಬೇಕಾಗಿರುತ್ತದೆ ಎಂದು ರಕ್ಷಣಾ ಹೇಳಿಕೆಯನ್ನು ಬರೆದುಕೊಟ್ಟಿರುತ್ತಾರೆ. ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಕಛೇರಿ ಶೀಘ್ರಲಿಪಿಗಾರರಾದ ಪುರುಷೋತ್ತಮ್ ದೇಸಾಯಿ ಇವರಿಗೆ ಕೇಳಿಸಲಾಗಿ, ಅದರಲ್ಲಿರುವ ಧ್ವನಿಯು ಎದುರುದಾರರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಧ್ವನಿಯಾಗಿರುತ್ತದೆ ಎಂದು ಧ್ವನಿಯನ್ನು ಗುರುತಿಸಿರುತ್ತಾರೆ. ಹಾಲಿ ಕೆಲಸ ಮಾಡುವ ಕಾರ್ಯನಿರ್ವಾಹಕ ಅಭಿಯಂತರರಾದ ಬಿ.ಬಿ.ಪಾಟೀಲ್ ರವರು, ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಆಗಿ ಶ್ರೀಕಾಂತ್ ಚೌಕಾ ರವರು ಕೆಲಸ ಮಾಡಿರುತ್ತಾರೆ ಎಂದು ಸ್ವ ಲಿಖಿತ ಹೇಳಿಕೆ ಬರೆದುಕೊಟ್ಟಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 03/05/2018 ರಂದು ಮಧ್ಯಾಹ್ನ 1.20 ರಿಂದ 3.00

ಗಂಟೆಯವರೆಗೆ ರಾಯಚೂರು, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

ಅದೇ ದಿನ ಪಂಚ ಸಾಕ್ಷಿದಾರರ ಸಮಕ್ಷಮ ತನಿಖಾಧಿಕಾರಿ ಬರೆದುಕೊಟ್ಟಿರುವ ಒಕ್ಕಣೆಯನ್ನು ಎರಡು ಬಾರಿ ಎದುರುದಾರರಿಂದ ಓದಿಸಿ, ಅದನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ನಂತರ ಅದನ್ನು ಸಿ.ಡಿ.ಗೆ ವರ್ಗಾಹಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ ಪಂಚರು ಸದರಿ ಧ್ವನಿಯು ಎದುರುದಾರರೆಂದು ಗುರುತಿಸಿರುತ್ತಾರೆ. ಅದೇ ಪ್ರಕಾರ ದೂರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಈ ಕುರಿತಂತೆ ಪ್ರತ್ಯೇಕವಾದ ಮಹಜರ್ ಕ್ರಮ ಜರುಗಿಸಿರುತ್ತಾರೆ. ಅದೇ ದಿನ ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರ ಸಂಬಂಧಿಯಾದ ಹುಲಿಗೆಪ್ಪ ಛಲವಾದಿ ಇವರಿಗೆ ಕೇಳಿಸಲಾಗಿ, ಅದರಲ್ಲಿದ್ದ ಒಂದು ಧ್ವನಿ ದೂರುದಾರದವರೆಂದು ಗುರುತಿಸಿರುತ್ತಾರೆ.

ದಿನಾಂಕ: 08/05/2018 ರಂದು ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 12.15 ಗಂಟೆಯವರೆಗೆ ನಿವೃತ್ತ ಕಾರ್ಯಪಾಲಕ ಅಭಿಯಂತರರು, ಶ್ರೀಕಾಂತ್ ಚೌಕಾ ಇವರು ವಾಸವಾಗಿರುವ ಸರ್ಕಾರಿ ವಸತಿ ಗೃಹ ನಂ: 12/10/58 ಇದನ್ನು ಶೋಧನೆ ಮಾಡಿ 24 ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡು ಕೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ದೂರುದಾರರು ಹಾಗೂ ಎದುರುದಾರರದೆಂದು ಹೇಳಲಾದ ಧ್ವನಿಯು ಅವರ ಮಾದರಿ ಧ್ವನಿಯೊಂದಿಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯು ದಿ: 08/10/2021 ರಂದು ಜಾರಿ ಮಾಡಿದ್ದು, ಸದರಿಯವರು ಸಲ್ಲಿಸಿದ ಸಮಜಾಯಿಷಿಯು ದಿ: 13/10/2021 ರಂದು ಈ ಪ್ರಾಧಿಕಾರಕ್ಕೆ

ತಲುಪಿರುತ್ತದೆ. ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿದ ಆಪಾದನೆಗಳು ಸತ್ಯಕ್ಕೆ ದೂರವಾಗಿದ್ದು, ತಾನು ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ದುರ್ನಡತೆ ತೋರಿರುವುದಿಲ್ಲ. ಲಂಚ ಬೇಡಿಕೆ ಸಂಭಾಷಣೆಯ ಆಧಾರದ ಮೇಲೆ ಪ್ರಕರಣ ದಾಖಲಾಗಿದ್ದನ್ನು, ಪಂಚರ ಸಮಕ್ಷಮ ಸಿ.ಡಿ ಅಮಾನತ್ತುಪಡಿಸಿಕೊಂಡಿದ್ದನ್ನು ನಿರಾಕರಿಸಿರುತ್ತಾರೆ. ಪ್ರಾಯೋಗಿಕ ಪಂಚನಾಮೆ ಜರುಗಿಸಿರುವುದನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ತಮ್ಮ ಕೊಠಡಿಯಲ್ಲಿ ಹಣ ಪಡೆದುಕೊಂಡು ಅದನ್ನು ಎರಡು ಕೈಗಳಿಂದ ಎಣಿಸಿ, ಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಂಡಿದ್ದನ್ನು, ಎರಡು ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುವುದನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು, ಟ್ರ್ಯಾಪ್ ಕಾಲದಲ್ಲಿ ನಡೆದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡ ವಿಷಯ ಹಾಗೂ ಸ್ಥಳದಲ್ಲಿ ತಯಾರಿಸಿದ ಟ್ರ್ಯಾಪ್ ಮಹಜರ್ ಸುಳ್ಳಿನಿಂದ ಕೂಡಿರುತ್ತದೆ ಎಂದು ನಿರಾಕರಿಸಿರುತ್ತಾರೆ. ತಾನು 33 ವರ್ಷ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಮಾಡಿದ್ದರಿಂದ ತನ್ನ ಶಿಸ್ತು ಕ್ರಮ ಜರುಗಿಸಬಾರದೆಂದು ನಿವೇದಿಸಿಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷಾದಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ನಂಬಲು ಈ ಹಂತದಲ್ಲಿ ಯಾವುದೇ ಸಮಂಜಸವಾದ ಆಧಾರಗಳು ಇರುವುದಿಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಾಮರ್ಶಿಸಲಾಗಿ ಎದುರುದಾರರು ಭ್ರಷ್ಟಾಚಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

5. ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ, ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಕ.ನಾ.ಸೇ. (ನಡತೆ) ನಿಯಮ, 1966 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ

ಕಂ/ಉಪಲೋಕ್/ಜಿಎಲ್‌ಬಿ/2382/2021
ಪಿ.ಓ.ಎ.ಆರ್.ಇ–5

ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

20/1/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.